ಹುದ್ದೆಗಳು ಇದ್ದು ಇವುಗಳನ್ನು ಭರ್ತಿ ಮಾಡುವ ಬಗ್ಗೆ ಕ್ರಮ ತೆಗೆದು ಕೊಳ್ಳಲಾಗುತ್ತಿದೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಈ ಹಿಂದೆ ಇದ್ದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು ಈಗ 40 ಬ್ಯಾಕ್‌ಲಾಗ್ (ಪ.ಜಾ) ಹುದ್ದೆಗಳು ಬಾಕಿ ಇರುತ್ತದೆ. ದಿನಾಂಕ:02.02.2006 ಪ್ರಕಟಿಸಿರುವ ಚಾಲಕ ಕಂ ನಿರ್ವಾಹಕ ಹುದ್ದೆಯ ಆಯ್ಕೆ ಸಂದರ್ಭದಲ್ಲಿ ಈ ಬ್ಯಾಕ್‌ಲಾಗ್ ಹುದ್ದೆಗಳ ಕೊರತೆ ಗುರುತಿಸಲಾಗಿದ್ದು ಈ ಹುದ್ದೆಗಳನ್ನು ಭರ್ತಿ ಮಾಡಲು ಸದ್ಯದಲ್ಲೆ ಕ್ರಮ ಕೈಗೊಳ್ಳಲಾಗುವುದು.

34, (100) ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್.) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) Whether the Government has conducted any Survey to identify the areas where deposits of various kinds of Minerals, which are available in the State (Area wise and Mineral wise details be furnished);

ಆ) If not, action taken by the Government ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ಹೌದು.

ರಾಜ್ಯದಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ವಿವಿಧ ಖನಿಜಗಳಿಗಾಗಿ ಅನ್ವೇಷಣೆ ಕಾರ್ಯ ಕೈಗೊಳ್ಳುತ್ತಾ ಬಂದಿದೆ. ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡ ಅನ್ವೇಷಣೆಗಳನ್ನು ಕೈಗೊಳ್ಳಲಾಗಿದೆ.

2002–2003 :

1. ಸುಣ್ಣ ಕಲ್ಲು ಶಿಲೆಗಳಿಗಾಗಿ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನಲ್ಲಿ ಪ್ರಾದೇಶಿಕ ಸಮೀಕ್ಷೆ:ಅನ್ವೇಷಣೆ ನಡೆಸಿದೆ.
2. ಸುಣ್ಣ ಶಿಲೆ ಮತ್ತು ಡೋಲೊಮೈಟ್ ಖನಿಜಗಳಿಗಾಗಿ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಭಾಗಗಳಲ್ಲಿ ಪ್ರಾದೇಶಿಕ ಸಮೀಕ್ಷೆ:ಅನ್ವೇಷಣೆ ನಡೆಸಲಾಗಿದೆ.
3. ಡೋಲೋಮೈಟ್ ಖನಿಜಕ್ಕಾಗಿ ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕಿನ ಭಾಗಗಳಲ್ಲಿ ಪ್ರಾದೇಶಿಕ ಸಮೀಕ್ಷೆ : ಅನ್ವೇಷಣೆ ನಡೆಸಲಾಗಿದೆ.
4. ಕ್ವಾರ್ಟ್ಜ್ ಮತ್ತು ಕೈನೈಟ್ ಖನಿಜಕ್ಕಾಗಿ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಹಾಗೂ ಹೊನ್ನಾಳಿ ತಾಲ್ಲೂಕಿನ ಭಾಗಗಳಲ್ಲಿ ಪ್ರಾದೇಶಿಕ ಸಮೀಕ್ಷೆ : ಅನ್ವೇಷಣೆ ನಡೆಸಲಾಗಿದೆ.

5. ಅಲಂಕಾರಿಕ ಶಿಲೆಗಾಗಿ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಮತ್ತು ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನ ಭಾಗಗಳಲ್ಲಿ ಪ್ರಾದೇಶಿಕ ಸಮೀಕ್ಷೆ:ಅನ್ವೇಷಣೆ ನಡೆಸಲಾಗಿದೆ.

2003 – 2004 :

1. ಸುಣ್ಣದ ಕಲ್ಲು ಶಿಲೆಗಳಿಗಾಗಿ ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮೇಲನಹಳ್ಳಿ ಗ್ರಾಮದಲ್ಲಿ ಪ್ರಾದೇಶಿಕ ಸಮೀಕ್ಷೆ:ಅನ್ವೇಷಣೆ ನಡೆಸಲಾಗಿದೆ.

2. ಕ್ವಾರ್ಟ್ಜ್ ಮತ್ತು ಕ್ವಾರ್ಟ್ಜೈಟ್ ಖನಿಜಗಳಿಗಾಗಿ ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕಿನ ಭಾಗಗಳಲ್ಲಿ ಮ್ಯಾಪಿಂಗ್ ನಡೆಸಲಾಗಿದೆ.

3. ಪ್ರಾದೇಶಿಕ ಸಮೀಕ್ಷೆ:ಅಲಂಕಾರಿಕ ಶಿಲೆಗಳಿಗಾಗಿ ಬಾಗಲಕೋಟೆ ಜಿಲ್ಲೆ, ಬಾದಾಮಿ ತಾಲ್ಲೂಕಿನಲ್ಲಿ ಹಾಗೂ ಮಡಿಕೇರಿ ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನಲ್ಲಿ ಪ್ರಾದೇಶಿಕ ಸಮೀಕ್ಷೆ:ಅನ್ವೇಷಣೆ ನಡೆಸಲಾಗಿದೆ.

2004 – 2005 :

1. ಸಿಮೆಂಟ್ ದರ್ಜೆ ಸುಣ್ಣದ ಕಲ್ಲಿಗಾಗಿ ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಭಾಗಗಳಲ್ಲಿ ಪ್ರಾದೇಶಿಕ ಸಮೀಕ್ಷೆ:ಅನ್ವೇಷಣೆ ನಡೆಸಲಾಗಿದೆ.

2. ಕ್ವಾರ್ಟ್ಜ್ ಖನಿಜಕ್ಕಾಗಿ ಚಿತ್ರದುರ್ಗ ಜಿಲ್ಲೆ, ಹೊಸ ದುರ್ಗ ತಾಲ್ಲೂಕಿನಲ್ಲಿ ಮ್ಯಾಪಿಂಗ್ ನಡೆಸಲಾಗಿದೆ.

3. ಕ್ಲೇ ಖನಿಜಕ್ಕಾಗಿ ಕೋಲಾರ ಜಿಲ್ಲೆ, ಚಿಂತಾಮಣಿ ತಾಲ್ಲೂಕಿನಲ್ಲಿ ಪ್ರಾದೇಶಿಕ ಸಮೀಕ್ಷೆ:ಅನ್ವೇಷಣೆ ನಡೆಸಲಾಗಿದೆ.

4. ನಿಕ್ಕಲ್ ಖನಿಜಕ್ಕಾಗಿ ಉತ್ತರಕನ್ನಡ ಜಿಲ್ಲೆಯ ಕುಮಟಾ ಮತ್ತು ಅಂಕೋಲ ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ಭೂರಾಸಾಯನಿಕ ಮಾದರಿಗಳ ಸಂಗ್ರಹಣೆ ಹಾಗೂ ಮ್ಯಾಪಿಂಗ್ ನಡೆಸಲಾಗಿದೆ.

5. ಅಲಂಕಾರಿಕ ಶಿಲೆಗಳಿಗಾಗಿ ಬಾಗಲಕೋಟೆ ಜಿಲ್ಲೆ, ಬೀಳಗಿ ತಾಲ್ಲೂಕಿನಲ್ಲಿ ಹಾಗೂ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನಲ್ಲಿ ಪ್ರಾದೇಶಿಕ ಸಮೀಕ್ಷೆ:ಅನ್ವೇಷಣೆ ನಡೆಸಲಾಗಿದೆ.

ಆ) ಉದ್ಭವಿಸುವುದಿಲ್ಲ.

35,(101) ಶ್ರೀ ಎಸ್.ರಾಜೇಂದ್ರನ್(ಕೆ.ಜಿ.ಎಫ್): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಬರ್ಟ್‌ಸನ್ ಪೇಟೆ ನಗರಸಭೆಯಲ್ಲಿ 18 ಗ್ರೂಪ್ 'ಸಿ' ಮತ್ತು 'ಡಿ' ಗ್ರೂಪ್ ವರ್ಗದವರ ಅನುಕಂಪದ ಆಧಾರದ ಮೇರೆಗೆ ನೇಮಕಾತಿ